**ದಿನಾಂಕಃ 20-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

3. ಸಾಕ್ಷಿಯು ರಿಜಿಸ್ಟರ್‌ನ ದೃಢೀಕೃತ ಪ್ರತಿಯೊಂದಿಗೆ ನೀಡಿದ ಕವಚ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-133 ಎಂದು, ಸಾಕ್ಷಿಯ ಸಹಿಯನ್ನು ನಿಪಿ-133(ಎ) ಎಂದು ಗುರುತಿಸಲಾಯಿತು. ಪೊಲೀಸರಿಂದ ಬಂದ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-134 ಎಂದು ಗುರುತಿಸಲಾಯಿತು. ದಿ.24-10-2018 ರಂದು ಕಾರವಾರ ಪೊಲೀಸರು ಘಟನಾ ಸ್ಥಳದ ಪಹಣಿ ಪತ್ರಿಕೆಯನ್ನು ನೀಡುವಂತೆ ಕೋರಿದ್ದು, ಅದರಂತೆ ನಾವು ನಮ್ಮ ದಾಖಲೆಯನ್ನು ಪರಿಶೀಲಿಸಿದಾಗ, ಕೃತ್ಯ ನಡೆದ ಸ್ಥಳವು ಉಳವಿ ಗ್ರಾಮದ ಅರಣ್ಯ ಸರ್ವೆ ನಂ.39 ಆಗಿರುವುದು ಕಂಡುಬಂದಿದ್ದು, ಅದರ ಪಹಣಿ ಪತ್ರಿಕೆಯನ್ನು ಸರಕಾರದ ಭೂಮಿ ವೆಬ್‌ಸೈಟ್ ಮೂಲಕ ಮುದ್ರಣ ಮಾಡಿ, ಪೊಲೀಸರಿಗೆ ನೀಡಿರುತ್ತೇವೆ. ಸಾಕ್ಷಿಯು ತಮಗೆ ಬಂದ ಕೋರಿಕೆ ಪತ್ರವನ್ನು ಹಾಗೂ ತಾನು ನೀಡಿದ ಆರ್.ಟಿ.ಸಿ.ಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-135 ಮತ್ತು 136 ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ ರಿಜಿಸ್ಟರ್ ಪ್ರತಿಯಲ್ಲಿ ಕಾರು ಹಾದು ಹೋದ ಸಮಯ ಮಧ್ಯಾಹ್ನ 3.00 ಗಂಟೆ 11 ನಿಮಿಷ ಆಗಿದ್ದು, ಈ ಹಿಂದಿನ ಮುಖ್ಯ ವಿಚಾರಣೆಯಲ್ಲಿ ಅದು ತಪ್ಪಾಗಿ 3.00 ಗಂಟೆ 21 ನಿಮಿಷ ಎಂದು ನಮೂದಾಗಿದೆ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್.ಎಸ್.ಎಸ್ ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-**

ಈ ದಿನ 2 ಮತ್ತು 3 ನೇ ಆರೋಪಿತರ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ, 5 ನೇ ಆರೋಪಿ ಪರ ವಕೀಲರು ಸದರಿ ವಕೀಲರು ವೈದ್ಯಕೀಯ ಚಿಕಿತ್ಸೆಯಲ್ಲಿರುತ್ತಾರೆ

ಎಂದು ತಿಳಿಸಿರುತ್ತಾರೆ. ಆದ್ದರಿಂದ 2 ಮತ್ತು 3 ನೇ ಆರೋಪಿತರ ಪರ ಪಾಟೀ ಸವಾಲನ್ನು ಮುಂದೂಡಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.